ಆಗಿರಲಿಲ್ಲ. ಕೊಚ್ಚಿಹೋದ ರಸ್ತೆಯ ಭಾಗವನ್ನು ಕೂಡಲೇ ದುರಸ್ತಿ ಮಾಡಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲಾಯಿತು. ಈ ಸೇತುವೆಯು ಹಳೆಯದಾಗಿದ್ದು ತಿರುವಿನಲ್ಲಿರುವುದರಿಂದ ಈ ಸೇತುವೆಗೆ ಬದಲಾಗಿ ಒಂದು ಹೊಸ ಸೇತುವೆಯನ್ನು ನಿರ್ಮಿಸಲು ಸುಮಾರು ೨೫ ಲಕ್ಷ ರೂ. ಗಳು ಬೇಕಾಗಿದ್ದು ಹಣಕಾಸಿನ ಲಭ್ಯತೆಗನುಗುಣವಾಗಿ ಮುಂಬರುವ ವರ್ಷಗಳಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವುದಾಗಿ ಪರಿಶೀಲಿಸಲಾಗುವುದು.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಕಾರ್ಯಾಚರಣೆಯಿಂದ ಕೇಂದ್ರಕ್ಕೆ ಹೋಗಬೇಕಾದರೆ ಈ ಮೈಸೂರು–ಮಾನಂದವಾಡಿ ರಸ್ತೆ ಬಹಳ ಮುಖ್ಯವಾದ ರಸ್ತೆಯಾಗಿದೆ. ೧೯೮೭–೮೮ರಲ್ಲಿ ಈ ರಸ್ತೆಗೆ ಏನೂ ಹಣ ಒದಗಿಸಲಿಲ್ಲ. ೧೯೮೮–೮೯ರ ಆಯವ್ಯಯ ಪಟ್ಟಿಯಲ್ಲಿ ಇದನ್ನು ಸೇರಿಸಿಕೊಂಡು ಹಣ ನೀಡಿದ್ದಾರೆಯೇ ಎಂದರೆ ಅದೂ ಇಲ್ಲ ಎಂದು ಮಾನ್ಯ ಸಚಿವರ ಉತ್ತರದಲ್ಲಿದೆ. ಹೊಮ್ಮರಗಳ್ಳಿ ಹತ್ತಿರ ಇದ್ದ ದೊಡ್ಡ ಸೇತುವೆ ಬಹಳ ಹಳೆಯದಾಗಿ ಸಂಚಾರಕ್ಕೆ ತೊಂದರೆಯಾಗಿದೆ. ಸಾಮಾನ್ಯ ಮಟ್ಟದಲ್ಲಿ ಅದರ ದುರಸ್ತಿ ಕಾರ್ಯವನ್ನು ಮಾಡಿದ್ದಾರೆ. ಇಲ್ಲಿ ಒಂದು ಉತ್ತಮ ಸೇತುವೆ ಆಗ ಬೇಕೆಂದು ಹಿಂದೆ ಇದ್ದಂಥ ಮಾನ್ಯ ಲೋಕೋಪಯೋಗಿ ಸಚಿವರೂ ಮುನಗಂಡಿದ್ದರು. ಈಗ ಅವರ ಉತ್ತರ ನೋಡಿದರೆ ಇದಕ್ಕೆ ಯಾವ ಯಾವ ರೀತಿಯಲ್ಲೂ ಹಣವನ್ನು ಒದಗಿಸಿಕೊಟ್ಟಿಲ್ಲ. ಅಂತರರಾಜ್ಯ ರಸ್ತೆ ಎಂದು ಹೇಳಿದರೆ ಅದು ಇಷ್ಟೇ ಅಡಿ ಆಗಲಿ ಇರಬೇಕು, ಇಷ್ಟೇ ಡಾಂಬರು ಹಾಕಬೇಕೆಂದು ಹೇಳಿದೆ. ಈ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಹಾಗೆ ಬೆಂಗಳೂರು ಮೈಸೂರು ಮಾರ್ಗವಾಗಿ ಮಾನಂದವಾಡಿ ಮಾರ್ಗವಾಗಿ ಹೋಗತಕ್ಕಂಥ ಅದು ಮುಖ್ಯವಾದ ರಸ್ತೆ. ಆದರೆ ಇದು ಲೋಕೋಪಯೋಗಿ ಇಲಾಖೆಯ ಒಂದು ಶೀರ್ಷಿಕೆಯಲ್ಲಿ ಬರುವುದಿಲ್ಲ. ಆದ್ದರಿಂದ ಇದುವರೆವಿಗೂ ಯಾವುದೇ ಒಂದು ನಿರ್ಧಾರವನ್ನು ಸಹ ಮಾಡಿಲ್ಲ. ಕೆಲವು ಭಾಗ ಅಂದರೆ ೧೯–೨೦ ಕಿಲೋಮೀಟರ್ ಉದ್ದ ಮುಳಗಡೆಯಾಗಿರತಕ್ಕಂಥ ಪ್ರದೇಶದ ರಸ್ತೆಗೆ ಬದಲಾಗಿ ಒಂದು ಬದಲಿ ರಸ್ತೆ ನಿರ್ಮಾಣವಾಗುತ್ತದೆ. ಇದು ಸುಮಾರು ೨೫ ಲಕ್ಷ ರೂಪಾಯಿಗಳ ಕೆಲಸ. ಕೆಲವು ಭಾಗದಲ್ಲಿ ಡಾಮರ್ ಕೆಲಸ ನಡೆಯಬೇಕಾಗಿದೆ ಆ ಬಗ್ಗೆ ಕ್ರಮ ತೆಗೆದುಕೊಂಡು ಟೆಂಡರ್ ಕರೆದು ಆದಷ್ಟು ಬೇಗ ಮಾಡಿಸುತ್ತೇನೆ ಆದು ಮುಖ್ಯ ರಸ್ತೆಯಾಗಿರುವುದರಿಂದ ಮಾಡಲಾಗುವುದು. ನೀರಾವರಿ ಶೀರ್ಷಿಕೆಯಲ್ಲಿ ಡಾಮರ್ ಹಾಕಿಸಬೇಕಾಗುತ್ತದೆ. ಜೊತೆಗೆ ನಾವು ಹಣದ ವ್ಯವಸ್ಥೆಯನ್ನು ಸಹ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಶಿವಣ್ಣ.—ಬಹಳ ಮುಖ್ಯ ರಸ್ತೆ ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ರಸ್ತೆಯ ಅಕ್ಕಪಕ್ಕದಲ್ಲಿ ವಾಹನಗಳು ಓಡಾಡುವುದಕ್ಕೆ ಆಗುವುದಿಲ್ಲ. ವಾಹನದ ಟೈರುಗಳೆಲ್ಲಾ ಹಾಳಾಗುತ್ತವೆ. ಆದ್ದರಿಂದ ಕೊನೆಪಕ್ಷ ಸೈಡ್‌ಗಳಲ್ಲಿ ಮೆಟಲಿಂಗ್ ಆದರೂ ಹಾಕಿಸಿ ಡಾಮರ್ ಮಾಡಿಸಿ ಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್ –ಇದನ್ನು ಮುಖ್ಯವಾಗಿ ಕಾಮಗಾರಿ ಆಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲದಿರುವುದರಿಂದ ಮತ್ತು ಆಂದಾಜು ಪಟ್ಟಿಯಲ್ಲಿ ಇಲ್ಲದಿರುವುದರಿಂದ ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆಂದು ಪರಿಶೀಲನೆ ಮಾಡೋಣ.

## ಬೆಳ್ತಂಗಡಿ ತಾಲ್ಲೂಕಿನಲ್ಲಿ ರಸ್ತೆಗಳ ನಿರ್ಮಾಣ.

೨೧೨೬. ಶ್ರೀ ಕ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನ ಸೋಮಾದಡ್ಕ ಕದಿರುದ್ಯಾವರ, ದಿದುಪೆ ಮತ್ತು ಸಾಂಸೆವರೆಗಿನ ರಸ್ತೆ ನಿರ್ಮಾಣ ಮತ್ತು ಸೇತುವೆಗಳ ನಿರ್ಮಾಣ ಮಾಡುವ ಕುರಿತು ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಸರ್ಕಾರವು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಆ) ಈ ಕಾವಂಗಾರಿಯನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದ ಅನುದಾನ ಬೇಕಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಈ ಕಾವಂಗಾರಿಯನ್ನು ಎಷ್ಟು ಸಮಯದೊಳಗೆ ಸರ್ಕಾರವು ಕೈಗೊಳ್ಳುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಆ) ಮತ್ತು (ಆ) ಕೇಂದ್ರ ಸರ್ಕಾರದವರು ಇ ಆ್ಯಂಡ್ ಐ ಕಾರ್ಯಕ್ರಮದಲ್ಲಿ ಕದಿರುದ್ಯಾವರ ದಿಬುಪೆ ಸಂಸೆ ರಸ್ತೆಯ ಅಭಿವೃದ್ಧಿಯ ಕೆಲಸವನ್ನು ೫೦ ಲಕ್ಷ ರೂ.ಗಳ ಅಂದಾಜು ಮತ್ತು ಕೇಂದ್ರ ಸರ್ಕಾರದಿಂದ ೨೫ ಲಕ್ಷ ರೂ.ಗಳ ಸಾಲ ರೂಪವಾದ ಸಹಾಯಧನೆಯನ್ನು ಒಪ್ಪಿದ್ದರು. ಈ ರಸ್ತೆಯ ನಿರ್ಮಾಣಕ್ಕೆ ವಿವರವಾದ ಸಮೀಕ್ಷೆಯನ್ನು ನಡೆಸಿದಾಗ ಇದಕ್ಕೆ ಬೇಕಾದ ಹಣ ೧೮೭.೧೪ ಲಕ್ಷ ರೂಗಳೆಂದು ಅಂದಾಜು ಮಾಡಲಾಯಿತು. ಕೇಂದ್ರ ಸರ್ಕಾರದವರು ಈ ಪರಿಷ್ಕೃತ ಮೊತ್ತಕ್ಕೆ ಒಪ್ಪಿಗೆ ಕೊಡಲಿಲ್ಲ ಮತ್ತು ೨೫ ಲಕ್ಷ ರೂ.ಗಳಿಗಿಂತ ಹೆಚ್ಚುವರಿ ಹಣವನ್ನು ರಾಜ್ಯ ಸರ್ಕಾರದಪರೆ ಭರಿಸಬೇಕೆಂದು ತಿಳಿಸಿದರು. ಇದ್ದಲ್ಲದೆ ಈ ರಸ್ತೆಯ ೧೫ ಕಿ.ಮಿ. ಭಾಗ ಅರಣ್ಯ ಭಾಗದಲ್ಲಿ ಹಾದು ಹೋಗುತ್ತಿದೆ; ಹೀಗೆ ಹೆಚ್ಚಿನ ಹಣ ಬೇಕಾದ ಕಾರಣದಿಂದ ಈ ರಸ್ತೆಯ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ಕೇಂದ್ರ ಸರ್ಕಾರದವರು ಈಗ ಈ ಕೆಲಸವನ್ನು ಇ ಆ್ಯಂಡ್ ಐ ಕಾರ್ಯಕ್ರಮದಿಂದ ತೆಗೆದುಬಿಟ್ಟಿದ್ದಾರೆ.

ಇ) ಸದ್ಯಕ್ಕೆ ಈ ಕೆಲಸವನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆಯಿಲ್ಲ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದವರು ಕೈ ಬಿಟ್ಟಿದ್ದಾರೆಂದು ರಾಜ್ಯ ಸರ್ಕಾರದವರು ಇದನ್ನು ಕೈ ಬಿಟ್ಟಿದ್ದಾರೆಯೇ ? ಇದು ಕ್ಷೇತ್ರದ ಜನತೆ ಅನೇಕ ವರ್ಷಗಳ ಬೇಡಿಕೆಯಾಗಿದ್ದು ೧೮೭ ಲಕ್ಷ ರೂಪಾಯಿಗಳು ಖರ್ಚು ಬರುತ್ತದೆಂದು ಹೇಳಿದ್ದಾರೆ. ಆದರೆ ಬದಲಿಗೆ ೫೦ ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ಸಿದ್ಧ ಮಾಡಿ ಟಾರ್ ರಸ್ತೆ ಮಾಡದಿದ್ದರೂ ಸಹ ಮಣ್ಣಿನ ರಸ್ತೆಯನ್ನಾದರೂ ಮಾಡಿಸಿ ಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ ಮೂಲತಃ ಇದನ್ನು ಅಂದಾಜಂ ಮಾಡಿದ್ದುದು ಶಿಂಶ ಶೃಂಗೇರಿ ಚಿಕ್ಕಮಗಳೂರು ಧರ್ಮಸ್ಥಳದ ಮಾರ್ಗವಾಗಿ ಹೋಗುವುದಕ್ಕೆ ಅನುಕೂಲವಾಗಲಿ ಎಂದು. ಯೋಜನೆಯಡಿಯಲ್ಲಿ ಈ ರಸ್ತೆ ಕಾವಂಗಾರಿಯನ್ನು ಸುಮಾರು ೧೮೭ ಲಕ್ಷ ರೂಪಾಯಿಗಳ ಒಂದು ಅಂದಾಜು ಮಾಡಲಾಗಿದೆ. ಇನ್ನೊಂದು ಭಾಗ ಸುಮಾರು ೫೦ ಲಕ್ಷ ರೂಪಾಯಿಗಳಲ್ಲಿ ಅಂದಾಜು ಮಾಡಲಾಗಿದೆ. ಒಂದು ಭಾಗ ಮಾಡಿ ಇನ್ನೊಂದು ಭಾಗದಲ್ಲಿ ರಸ್ತೆ ಮಾಡದಿದ್ದರೆ ಆ ರಸ್ತೆಯನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಬರುವುದಿಲ್ಲ. ಎರಡು ರಸ್ತೆಗಳನ್ನು ಒಟ್ಟಿಗೆ ಮಾಡಬೇಕಾಗುತ್ತದೆ. ಇದಕ್ಕೆ ಸುಮಾರು ೧೮೭ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ರಸ್ತೆಯನ್ನು ಅರಣ್ಯ ಪ್ರದೇಶದಲ್ಲಿ ಮಾಡಬೇಕಾಗಿರುವುದರಿಂದ ಒಟ್ಟಿಗೆ ಮಾಡಬೇಕೆನ್ನುವುದು ಇಲಾಖೆ ಉದ್ದೇಶ. ಮಾನ್ಯ ಸದಸ್ಯರು ಹೇಳಿದ್ದಾದು ಎಷ್ಟು ಸಾಧ್ಯವೋ ನೋಡೋಣ, ಆಮೇಲೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ನಾನು ಹೇಳುತ್ತಿರುವುದೇನೆಂದರೆ ೧೮೭ ಲಕ್ಷ ರೂಪಾಯಿಗಳಲ್ಲಿ ಏನೊಂದು ಅಂದಾಜಂ ಮಾಡಿದ್ದೀರಿ ಅದನ್ನು ಮಾಡದಿದ್ದರೂ ಪರವಾಗಿಲ್ಲ. ಆದರೆ ೫೦ ಲಕ್ಷ ರೂಪಾಯಿಗಳಲ್ಲಿ ಮಾಡಿರತಕ್ಕಂಥ ಮತ್ತೊಂದು ಅಂದಾಜಿನಲ್ಲಿ ಟಾರ್ ರಸ್ತೆ ಮಾಡದಿದ್ದರೂ ಪರವಾಗಿಲ್ಲ ಮಣ್ಣಿನ ರಸ್ತೆಯನ್ನಾದರೂ ಮಾಡಿ ಕೊಡಿ.

ಶ್ರೀ ಎಂ. ಚಂದ್ರಶೇಖರ್.—೫೦ ಲಕ್ಷ ರೂಪಾಯಿಗಳ ಯೋಜನೆ ಹಿಂದೆ ಮಾಡಿದ್ದುದು. ಆ ಹಣವನ್ನು ಉಪಯೋಗಿಸಿಕೊಂಡು ಮಣ್ಣಿನ ರಸ್ತೆ ಮಾಡಿ ಎಂದು ತಾವು ಹೇಳುತ್ತಿದ್ದೀರಿ. ಈ ರಸ್ತೆಗೆ ೫೦ ಲಕ್ಷ ರೂಪಾಯಿಗಳ ಅಂದಾಜು ಮಾಡಲಾಗಿತ್ತು. ಈ ಹಣದಲ್ಲಿ ೨೫ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡುತ್ತದೆಂದು ತಿಳಿದುಕೊಂಡಿದ್ದೆವು. ಆದರೆ ಕೇಂದ್ರ ಸರ್ಕಾರದವರು ಹಣವನ್ನು ಕೊಡದೇ ಇದ್ದುದರಿಂದ ಈ ರಸ್ತೆಯನ್ನು ಮಾಡಿಸುವುದಕ್ಕಾಗಲಿಲ್ಲ. ಈಗ ರಾಜ್ಯ ಸರ್ಕಾರವೇ ಹೊಸದಾಗಿ ಯೋಜನೆ ಮಾಡಿ ಕೆಲಸವನ್ನು ತೆಗೆದುಕೊಳ್ಳಲು ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಕೆ. ವಸಂತ ಬಂಗೇರ.—ಎಷ್ಟು ಸಮಯದಲ್ಲಿ ಈ ರಸ್ತೆಯ ನಿರ್ಮಾಣದ ಕೆಲಸವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಪರಿಶೀಲಿಸುತ್ತೇವೆ ಎಂದ ಮೇಲೆ ಸಮಯ ಹೇಳುವುದಕ್ಕಾಗುವುದಿಲ್ಲ.

## ಮಹಾರಾಷ್ಟ್ರದ ದೂಧ್‌ಗಂಗಾ ಯೋಜನೆ

೧೯೨೭. ಶ್ರೀ ವೀರಕುಮಾರ್ ಎ. ಪಾಟೀಲ್ (ನಿಪ್ಪಾಣಿ) — ಪೂರ್ವ ಕೃಷ್ಣಾ ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹಾರಾಷ್ಟ್ರ ರಾಜ್ಯದ ಕಳಮವಾಡಿ ಬಳಿ ನಿರ್ಮಾಣವಾಗುತ್ತಿರುವ ದೂಧ್ ಗಂಗಾ ಯೋಜನೆಯಲ್ಲಿ ರಾಜ್ಯದ ಪಾಲು ಎಷ್ಟು?

ಆ) ಹಾಗಿದ್ದರೆ ಇದುವರೆಗೆ ಆ ಬಿಡುಗಡೆಗಿರುವ ಹಣವೆಷ್ಟು ?

ಇ) ನಮ್ಮ ರಾಜ್ಯದಲ್ಲಿ ಕಾಲುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯ ಖರ್ಚಿನಲ್ಲಿ ನಮ್ಮ ರಾಜ್ಯದ ಪಾಲು ಎಷ್ಟು ಎಂಬುದು ಎರಡೂ ರಾಜ್ಯಗಳ ನಡುವೆ ಇನ್ನೂ ಪರಿಶೀಲನೆಯಲ್ಲಿದೆ.

ಆ) ಮಹಾರಾಷ್ಟ್ರ ಸರ್ಕಾರವು ಕರ್ನಾಟಕ ಸರ್ಕಾರದ ಭಾಗವಾದ ೭೭೫.೯೨ ಲಕ್ಷ ರೂ.ಗಳನ್ನು ಬಿಡುಗಡೆ ಮಾಡುವಂತೆ ಕೋರಿದುದಕ್ಕೆ ಎದುರಾಗಿ, ಅಂತಿಮ ನಿರ್ಧಾರವನ್ನು ಕಾದು, ೨೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಪರಿಷ್ಕೃತ ಅಂತಿಮ ಕಾಲುವೆಯ ತಳ ಮಟ್ಟವನ್ನು ಕರ್ನಾಟಕ ಸೀಮೆವರೆಗೆ ಮಹಾರಾಷ್ಟ್ರ ಸರ್ಕಾರದವರು ಒದಗಿಸಿದ ನಂತರ ಅಂತಿಮ ಸರ್ವೆ ಕೆಲಸವನ್ನು ತೆಗೆದುಕೊಳ್ಳಲಾಗುವುದು.

SRI VEERAKUMAR. A. PATIL.— Regarding this project, the Maharashtra agriculturists are getting banefit but our Government has contributed only Rs. 2 Crores when they have asked for Rs. 775.92 lakhs. I request the Government to contribute some more funds to the Maharashtra Govt. so that they will atleast start the canal in our State.

SRI S. R. BOMMAI.— The correspondence and discussion between Karnataka Government and Maharashtra Govt. have taken place. No final decision has been taken. Meanwhile, we have released Rs. 2 Crores. As and when necessary, we will release the funds and Karnataka farmers will get the benefit.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಇದು ಮಹತ್ವವಾದ ಒಂದು ಯೋಜನೆ. ಈ ಯೋಜನೆಗೆ ಮಹಾರಾಷ್ಟ್ರ ಸರ್ಕಾರದವರು ಹಣ ಬಿಡುಗಡೆ ಮಾಡಿಲ್ಲವೆಂದು ಆದ್ದರಿಂದ ಕೆಲಸ ಮಾಡುವುದಕ್ಕಾಗಲಿಲ್ಲವೆಂದು ಹೇಳಿರುವುದು ಸರಿಯಲ್ಲ. ಆಮೇಲೆ, ಈ ಕೆಲಸಕ್ಕಾಗಿ ೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ೧ ಕೋಟಿ ರೂಪಾಯಿಗಳನ್ನು ಮಾತ್ರ ನಮ್ಮ ಸರ್ಕಾರ ಬಿಡುಗಡೆ ಮಾಡಿದೆ. ಇದರಲ್ಲಿ ಯಾವುದು ಸತ್ಯ ಯಾವುದು ಅಸತ್ಯ ಎಂಬುದನ್ನು ನಾನು ಕೇಳುತ್ತಿದ್ದೇನೆ.